## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಬಲ್ಕೀಸ್ ಬಾನು ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ

**ಪ್ರಶ್ನೆ:** ಪ್ರತಿಷ್ಠಿತ ವಾರ್ತಾಭಾರತಿ ದಿನ ಪತ್ರಿಕೆಯಲ್ಲಿ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸುಕ್ಷೇತ್ರ ಗೊಡಚಿ ಗ್ರಾಮದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಇಬ್ಬರು ಯುವಕರನ್ನು ಮರಕ್ಕೆ ಕಟ್ಟಿ ಹಾಕಿ ಹಲ್ಲೆ ಮಾಡಿದ ಘಟನೆ ವರದಿಯಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಆಗಿದೆ.

ಹಲ್ಲೆ ಮಾಡಿದ ಲಿಂಗಾಯತ ಸಮುದಾಯದವರು ಎಂದು ದಾಖಲಾಗಿರುತ್ತದೆ. ಎಸ್.ಟಿ. ಸಮುದಾಯದ ಯುವಕರ ಮೇಲೆ ಹಲ್ಲೆ ಮಾಡಿರುವ ಬಗ್ಗೆ ಕಟಕೋಳ ಪೊಲೀಸ್ ಠಾಣೆಯಲ್ಲಿ ದೂರು, ಪ್ರತಿ ದೂರು ದಾಖಲಾಗಿದೆ.

ಹಲ್ಲೆ ಮಾಡಿರುವ ಆರೋಪದಡಿ ಲಿಂಗಾಯತ ಸಮಾಜದ ಈರಣ್ಣ ಸಂಗಪ್ಪ ಪಾಕನಟ್ಟಿ, ಬಸನಗೌಡ ನಿಂಗನಗೌಡ ಪಾಟೀಲ್, ಪ್ರದೀಪ ಈರಣ್ಣ ಪಾಕನಟ್ಟಿ, ನಿಂಗರಾಜ ಈರಪ್ಪ ಪಾಕನಟ್ಟಿ, ಸಚಿನ್ ದಾನಪ್ಪ ಪಾಕನಟ್ಟಿ ಎಂಬುವವರ ವಿರುದ್ಧ ಕೊಲೆಯತ್ನ, ಮಾರಣಾಂತಿಕ ಹಲ್ಲೆ ಹಾಗೂ ಜಾತಿ ನಿಂದನೆ ದೂರು ದಾಖಲಾಗಿದೆ.

ಹಲ್ಲೆಗೊಳಗಾದವರನ್ನು ಈರಣ್ಣ ವಿಠ್ಠಲ ನಾಯ್ಕರ ಹಾಗೂ ಲಕ್ಷ್ಮಣ ಮಲ್ಲಪ್ಪ ಚಿಪ್ಪಲಕಟ್ಟಿ ಎಂದು ಗುರುತಿಸಲಾಗಿದೆ. ಆಗಸ್ಟ 5 ರಂದೇ ಹಲ್ಲೆಗೊಳಗಾಗಿದ್ದು, ಇದು ತಡವಾಗಿ ಬೆಳಕಿಗೆ ಬಂದಿರುತ್ತದೆ. ಇದೊಂದು ಉದಾಹರಣೆ ಅಷ್ಟೆ.

ಮುಖ್ಯ ರಸ್ತೆ ಬದಿಯಲ್ಲಿರುವ ಜಮೀನುಗಳ ಮಾಲೀಕರು, ಹಿಂಬದಿ ಹೊಲಕ್ಕೆ ಹೋಗಿ ಉಳುಮೆ ಮಾಡಲು ದಾರಿ ಬಿಡದೆ ಇರುವುದು ರಾಜ್ಯದಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿರುತ್ತವೆ.

ಜಮೀನುಗಳಿಗೆ ಹೋಗಲು ದಾರಿ ಸಮಸ್ಯೆಗಳನ್ನು ಸ್ಥಳೀಯ ತಹಸೀಲ್ದಾರ್ ನೇತೃತ್ವದಲ್ಲಿ ಬಗೆಹರಿಸಬೇಕು. ಇಲ್ಲವೇ ಸರ್ಕಾರವೇ ಇದಕ್ಕೆ ಹೊಲದ ದಾರಿ ನಕ್ಷೆಯ ಮೂಲಕ ಹಿಂಬದಿ ಹೊಲಗಳ ದಾರಿಯನ್ನು ತೋರಿಸಲು ಆದೇಶಿಸಬೇಕೆಂಬುದರ ಕುರಿತು.

**ಉತ್ತರ:** ದಿನಾಂಕ:09.08.2025 ರಂದು ಶ್ರೀ ವಿಠ್ಠಲ ಲಕ್ಷ್ಮಣ ನಾಯ್ಕರ (ಪರಿಶಿಷ್ಟ ಪಂಗಡ), ಇವರು ಕಟಕೋಳ ಪೊಲೀಸ್ ಠಾಣೆಗೆ ಹಾಜರಾಗಿ ಫಿರ್ಯಾದಿ ಕೊಟ್ಟಿದ್ದು ಅದರಲ್ಲಿ- ಆರೋಪಿತರಾದ 1) ಈರಣ್ಣ ಸಂಗಪ್ಪ ಪಾಕನಟ್ಟಿ 2) ಬಸನಗೌಡ ನಿಂಗನಗೌಡ ಪಾಟೀಲ್ 3) ಪ್ರದೀಪ ಈರಣ್ಣ ಪಾಕನಟ್ಟಿ 4) ಮಹಾಂತೇಶ ಲಕ್ಷ್ಮಣ ಪಾಕನಟ್ಟಿ 5) ಸಚಿನ ದಾನಪ್ಪ ಪಾಕನಟ್ಟಿ 6) ನಿಂಗರಾಜ ಈರಪ್ಪ ಪಾಕನಟ್ಟಿ 7) ಸಂಗಪ್ಪ ನಿಂಗಪ್ಪ ಪಾಕನಟ್ಟಿ ಸಾಃ ಎಲ್ಲರೂ ಗೊಡಚಿ ತಾಃ ರಾಮದುರ್ಗ ಇವರು ಹಿಂದೂ ಲಿಂಗಾಯತ ಜಾತಿಗೆ ಸೇರಿದವರಿದ್ದು, ಇವರುಗಳ ನಡುವೆ ಜಮೀನಿನ ಹಾದಿಯ ಸಲುವಾಗಿ ತಂಟೆ ತಕರಾರು ಇದ್ದು, ದಿನಾಂಕ: 05.08.2025 ರಂದು 4-30 ಗಂಟೆಗೆ ಆರೋಪಿತರಾದ ಈರಣ್ಣ ಸಂಗಪ್ಪ ಪಾಕನಟ್ಟಿ ಮತ್ತು ಬಸನಗೌಡ ನಿಂಗನಗೌಡ ಪಾಟೀಲ್ ಇವರಿಬ್ಬರೂ ಕೂಡಿಕೊಂಡು ಮೋಟಾರ್ ಸೈಕಲ್ ನಿಂದ ಬಂದು ದೂರುದಾರನ ಮಗ ಗಾಯಾಳು ಈರಣ್ಣ ಈತನಿಗೆ ಸ್ವಲ್ಪ ಕೆಲಸ ಇದೆ ಬಾ

ಅಂತಾ ಹೇಳಿ ಕರೆದುಕೊಂಡು ರಮೇಶ ಪಾಕನಟ್ಟಿ ಈತನ ತೋಟದ ಮನೆಗೆ ಕರೆದುಕೊಂಡು ಹೋಗಿದ್ದು, ಆಗ ಉಳಿದ ಆರೋಪಿತರೆಲ್ಲರೂ ಸೇರಿಕೊಂಡು ಗಾಯಾಳು ಈರಣ್ಣಾ ನಾಯ್ಕರ ಈತನ ಮೂಲಕ ಇನ್ನೊಬ್ಬ ಗಾಯಾಳು ಲಕ್ಷ್ಮಣ ಚಿಪ್ಪಲಕಟ್ಟಿ ಈತನಿಗೂ ಸಹ ಕರೆಯಿಸಿಕೊಂಡು ಅವಾಚ್ಯವಾಗಿ ಬೈದು 'ನಮಗ ಅವರ ಹೊಲದಾಗ ಹಾದಿ ಕೇಳಿದ್ರ ಕೊಡವಲ್ಲರು' ಎಂದು ಜಾತಿ ನಿಂದನೆ ಮಾಡಿ, , ನೆಲಕ್ಕೆ ಕೆಡವಿ ಕಾಲಿನಿಂದ ಒದೆಯುತ್ತಾ ಕೆಳಜಾತಿಯವರೆಂದು ನಿಂದಿಸಿ, ಗಿಡಕ್ಕೆ ಕಟ್ಟಿ ಥಳಿಸಿ, ಒತ್ತಾಯ ಪೂರ್ವಕ ವಿಡಿಯೋ ಮಾಡಿ ನಿಮ್ಮ ಮೇಲೆ ಪೋಕ್ಸೋ ಕೇಸ್ ಹಾಕುತ್ತೇವೆ ಎಂದು ಜೀವ ಬೆದರಿಕೆ ಹಾಕಿ, ಆರೋಪಿತನಾದ ಸಚೀನ ದಾನಪ್ಪ ಪಾಕನಟ್ಟಿ ಈತನು ತನ್ನ ಕೈಯಲ್ಲಿದ್ದ ವೈಯರ್‌ನಿಂದ ಹಾಗೂ ಆರೋಪಿತನಾದ ನಿಂಗರಾಜ ಈರಪ್ಪ ಪಾಕನಟ್ಟಿ ಈತನು ಹಗ್ಗದಿಂದ ಗಾಯಾಳುಗಳಿಗೆ ಬಡಿದು, ಆರೋಪಿ ಈರಣ್ಣಾ ಸಂಗಪ್ಪ ಪಾಕನಟ್ಟಿ ಈತನು ತನ್ನ ಕೈಯಲ್ಲಿದ್ದ ಕುಡಗೋಲಿನಿಂದ ಗಾಯಾಳು ಲಕ್ಷ್ಮಣ ಚಿಪ್ಪಲಕಟ್ಟಿ ಈತನ ಕುತ್ತಿಗೆಯ ಹತ್ತಿರ ತಂದು, ಆರೋಪಿತನಾದ ಸಚೀನ ದಾನಪ್ಪ ಪಾಕನಟ್ಟಿ ಈತನು ಚಪ್ಪಲಿಯಿಂದ ಲಕ್ಷ್ಮಣನ ಕಪಾಳಕ್ಕೆ ಬಡಿದು ಸಾದಾ ಗಾಯಪಡಿಸಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ನೀಡಿದ ದೂರಿನ ಮೇರೆಗೆ ಕಟಕೋಳ ಪೊಲೀಸ್ ಠಾಣೆ ಅಪರಾಧ ಸಂಖ್ಯೆ:94/2025 ಕಲಂ: 189(2), 191(2), 191(3), 126(2), 127(2), 115(2), 118(1), 133, 352, 351(2)ಸಹಕಲಂ 190 ಬಿ.ಎನ್.ಎಸ್-2023 ಮತ್ತು ಕಲಂ.3(1)(r), 3(1)(s), 3(2)(va) ST/ST PoA Amendment Act 2015 ನೇದ್ದರಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖಾಧಿಕಾರಿಗಳು ತನಿಖೆ ಕೈಗೊಂಡಿರುತ್ತಾರೆ.

ಸದರಿ ಪ್ರಕರಣದಲ್ಲಿಯ ಆರೋಪಿತರಾದ ಎ-1 ಈರಣ್ಣಾ ಸಂಗಪ್ಪ ಪಾಕನಟ್ಟಿ, ಎ-4 ಮಹಾಂತೇಶ ಲಕ್ಷ್ಮಣ ಪಾಕನಟ್ಟಿ ಮತ್ತು ಎ-5 ಸಚೀನ ದಾನಪ್ಪ ಪಾಕನಟ್ಟಿ ರವರಿಗೆ ದಿನಾಂಕ:11.08.2025 ರಂದು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಸದರಿ ಆರೋಪಿತರು ಮಾನ್ಯ ನ್ಯಾಯಾಂಗ ಬಂಧನದಲ್ಲಿ ಇರುತ್ತಾರೆ. ಸದರಿ ಪ್ರಕರಣದಲ್ಲಿ ನೊಂದ ವ್ಯಕ್ತಿಗಳಿಗೆ ಪರಿಹಾರ ಮಂಜೂರಾತಿಗಾಗಿ ತನಿಖಾಧಿಕಾರಿಗಳು ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ರವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಘಟನೆಗೆ ಸಂಬಂಧಿಸಿದಂತೆ ರಮೇಶ ಲಕ್ಷ್ಮಣ ಪಾಕನಟ್ಟಿ ಸಾ: ಗೊಡಚಿ ಇವರು ಪ್ರತಿದೂರು ದಾಖಲು ಮಾಡಿದ್ದು, ಅದರಲ್ಲಿ ದಿನಾಂಕ: 02.08.2025 ರಂದು ಆರೋಪಿತರಾದ ಈರಣ್ಣಾ ವಿಠ್ಠಲ ನಾಯ್ಕರ ಸಾ: ಗೊಡಚಿ ಮತ್ತು ಲಕ್ಷ್ಮಣ ಮಲ್ಲಪ್ಪಾ ಚಿಪ್ಪಲಕಟ್ಟಿ ಸಾ: ಗೊಡಚಿ ಇವರು ಕೂಡಿಕೊಂಡು ದೂರುದಾರರ ಮಗಳು 14 ವರ್ಷದ ಅಪ್ರಾಪ್ತ ವಯಸ್ಸಿನವಳು ಇರುತ್ತಾಳೆ ಎಂದು ಗೊತ್ತಿದ್ದರೂ ಸಹ ಶಾಲೆಗೆ ಹೋಗುವಾಗ ಬರುವಾಗ ಬಸ್ಸಿನಲ್ಲಿ ಹಾಗೂ ಮೋಟರ್ ಸೈಕಲ್‌ನಿಂದ ಹಿಂಬಾಲಿಸುವುದು ಮಾಡಿ, ಅವಳಿಗೆ ಚುಡಾಯಿಸಿ, ಹಾಳೆಯಲ್ಲಿ ಫೋನ್ ನಂಬರ್ ಬರೆದು ಪ್ರೀತಿ ಮಾಡು ಇಲ್ಲದ್ದಿದ್ದರೆ ನಿನ್ನ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿದ್ದಲ್ಲದೆ ದೂರುದಾರನ ತಮ್ಮ ಮಹಾಂತೇಶ ಈತನಿಗೆ ಈರಣ್ಣಾ ನಾಯ್ಕರ

ಈತನು 'ನೀವೇನು ಮಾಡಕೋತೇರಿ ಮಾಡಕೋರಿ, ನನ್ನ ಗೆಳೆಯ ಲಕ್ಷ್ಮಣ ನಿಮ್ಮ ಮಗಳಿಗೆ ಇಷ್ಟ ಪಡುತ್ತಿದ್ದಾನೆ' ಎಂದು ನೊಂದ ಬಾಲಕಿಯ ಮಾನಕ್ಕೆ ಧಕ್ಕೆಯನ್ನುಂಟು ಮಾಡುವ ಉದ್ದೇಶದಿಂದ ಚುಡಾಯಿಸಿ, ಹಿಂಬಾಲಿಸಿ ಲವ್ ಮಾಡು ಇಲ್ಲದ್ದಿದ್ದರೆ ನಿನ್ನನ್ನು ಬಿಡುವುದಿಲ್ಲ ಎಂದು ಜೀವದ ಧಮಕಿ ಹಾಕಿರುತ್ತಾರೆ ಎಂದು ನೀಡಿದ ದೂರಿನ ಮೇರೆಗೆ ಕಟಕೋಳ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 95/2025 ಕಲಂ: 78(2), 79, 352, 351(1), 3(5) ಬಿ.ಎನ್.ಎಸ್ ಮತ್ತು ಕಲಂ 12 ಪೋಕ್ಸೋ ಕಾಯ್ದೆ-2012ನೇದ್ದರಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ. ಸದರಿ ಪ್ರಕರಣಗಳು ತನಿಖೆಯಲ್ಲಿರುತ್ತವೆ.

ಸಂಖ್ಯೆ: ಹೆಚ್‌ಡಿ 41 ಎಸ್‌ಡಿಎನ್ 2025

**(ಡಾ: ಜಿ.ಪರಮೇಶ್ವರ)**
ಗೃಹ ಸಚಿವರು